ಸಂತೋಷ ವಾಯಿತು.

ಗುಡಿಸಲಿನಲ್ಲಿ ಸ್ನಾನ ಮಾಡುವ ಮುನ್ನ ಜನಿವಾರವನ್ನು ಬಿಚ್ಚಿ ಶಾಲೆಯ ಬ್ಯಾಗಿನೊಳಗೆ ಇಡುತ್ತಿದ್ದ. ಮುಳ್ಕಟ್ಟ ಹೊರ ಹೋದಾಗ, ಕರ್ರಿಲಿ ಅಡುಗೆ ಮನೆಯಲ್ಲಿದ್ದಾಗ ಧರಿಸುತ್ತಿದ್ದ.

ಕೆರೆಯ ಬಳಿ ತಡವಾಗಿ ಹೋಗಿ ಸೂರ್ಯನಿಗೆ ತರ್ಪಣ ಬಿಟ್ಟು ಧ್ಯಾನ ಮಾಡುತ್ತಿದ್ದ ಗೊದ್ಲೆಗೆ, ನೀರಿನಲ್ಲಿ ಬ್ರಾಹ್ಮಣರಂತೆ ಮುಳುಗೇಳಬೇಕೆಂಬ ಮನಸಾಯಿತು. ಬ್ರಾಹ್ಮಣರು ಸ್ನಾನ ಮಾಡುತ್ತಿದ್ದ ಜಾಗವಾದ್ದರಿಂದ ಅಲ್ಲಿಗೆ ಬೇರೆ ಯಾರೂ ಬರುತ್ತಿರಲಿಲ್ಲ.

ಈ ಧೈರ್ಯದ ಮೇಲೆಯೇ ಗೊದ್ಲೆ, ಅಂಗಿ, ಚಡ್ಡಿ ಬಿಚ್ಚಿಟ್ಟು ನಿರ್ವಾಣನಾಗಿ ನೀರಿಗಿಳಿದು ಮೂರು ಬಾರಿ ಮುಳುಗೆದ್ದು ಸೂರ್ಯನಿಗೆ ತರ್ಪಣ ಬಿಟ್ಟ.

ಲಗುಬಗೆಯಿಂದ ನೀರಿನಿಂದ ಮೇಲೆ ಬಂದವನು ಚಡ್ಡಿ ಹಾಕಿಕೊಂಡ. ಅಂಗಿ ತೆಗೆದುಕೊಂಡು ಎಡ ತೋಳನ್ನು ತೂರಿಸುತ್ತಿದ್ದವನಿಗೆ, ಕಬ್ಬಿನ ಗರಿ, ಕಳಸ, ಬಾಡಿದ ತುಳಸಿ ಹಾರ ಹಿಡಿದುಕೊಂಡು ನಿಂತಿದ್ದ ರಾಮಸ್ವಾಮಿ ತನ್ನನ್ನು ಸುಟ್ಟು ಬಿಡುವಂತೆ ನೋಡುತ್ತಿರುವುದು ಕಂಡಿತು. ಅವನ ಮೈ ಭಯದಿಂದ ಸಣ್ಣಗೆ ನಡುಗಲಾರಂಭಿಸಿತು.

ರಾಮಸ್ವಾಮಿ ಏನೊಂದೂ ಮಾತನಾಡದೆ ಮತ್ತೊಂದು ಬದಿಗೆ ಹೋಗಿ, ಕಬ್ಬಿನ ಗರಿ, ತುಳಸಿಯನ್ನು ನೀರಿನಲ್ಲಿ ಹಾಕಿ ಕಳಸದಲ್ಲಿದ್ದ ನೀರನ್ನು ಸುರುವಿ ಬಿರುಸಾದ ಹೆಜ್ಜೆ ಹಾಕುತ್ತ ಹೊರಟು ಹೋದರು. ಗೊದ್ಲೆ ಅಂಗಿಯ ಗುಂಡಿಗಳನ್ನು ಹಾಕಿಕೊಂಡು ಭಾರವಾದ ಹೆಜ್ಜೆಗಳನ್ನಿಡುತ್ತ ಊರಿನತ್ತ ಹೊರಟ.

ಸ್ವಭಾವತಃ ಸಹನಶೀಲರಾದ ರಾಮಸ್ವಾಮಿ ಅವರಿಗೆ, ಹೊಲೆಯನೊಬ್ಬ ಜನಿವಾರ ಧರಿಸಿರುವುದನ್ನು ನೋಡಿ ಸಹಿಸಿಕೊಳ್ಳಲಾಗಲಿಲ್ಲ. ಅವರ ಮನಸ್ಸು ಕ್ರೋಧದಿಂದ ಕುದಿಯತೊಡಗಿತು. ಕೆಂಪಗಿರುವ ಮುಖ ಮತ್ತಷ್ಟು ಕೆಂಪಗಾಗಿತ್ತು.

'ಹಾಳಾಯಿತು, ಕುಲಗೆಟ್ಟು ಹೋಯಿತು. ಕೀಳು ಜಾತಿಯವನು ಬ್ರಾಹ್ಮಣರ ಪವಿತ್ರ ಸಂಕೇತವಾದ ಜನಿವಾರ ಹಾಕಿಕೊಳ್ಳುವುದೆಂದರೇನು?' ಎಂದು ಕೂಗಾಡುತ್ತ ಅಗ್ರಹಾರ ಪ್ರವೇಶಿಸಿದ ಅವರನ್ನು 'ಯಾಕೆ, ಏನಾಯಿತು' ಎಂದು ಎಲ್ಲರು ಸುತ್ತುವರೆದು ನಿಂತರು.

'ಕೆಳ್ಗೇರಿಯ ಮುಳ್ಕಟ್ಟನ ಮಗ ಗೊದ್ಲೆ ಇವತ್ತು ಕೆರೆಲಿ ನಾವು ಸ್ನಾನ ಮಾಡುತ್ತಿದ್ದ ಜಾಗದಲ್ಲೇ ನೀರಿನಲ್ಲಿ ಮುಳುಗೇಳಿ ಸೂರ್ಯನಿಗೆ ತರ್ಪಣ ಬಿಡುತ್ತಿದ್ದ. ಜನಿವಾರನೂ ಹಾಕ್ಕಂಡಿದ್ದಾನೆ'.

ರಾಮಸ್ವಾಮಿ ಮಾತು ಕೇಳಿ ಎಲ್ಲರೂ ಹೌಹಾರಿದರು.

'ಹಾಂ ಜನಿವಾರ ಹಾಕಿದ್ದಾನಾ? ಅವನಿಗೆಷ್ಟು ಧೈರ್ಯ' ಎಂದರು ಸಿಟ್ಟಿಗೆದ್ದ ಯುವಕರು.

'ನಾನವತ್ತು ಗೊದ್ಲೆ ಧ್ಯಾನಕ್ಕೆ ಕುಳಿತಿರುವುದನ್ನು ನೋಡಿ ಸಹಿಸಲಾಗದೆ ಅವನಿಗೆ ಕಲ್ಲಿನಿಂದ ಹೊಡೆದಾಗ ನೀವು, ಅವನು ಚಿಕ್ಕುಡುಗ, ಏನೂ ತಿಳೀದು ಎಂದು ಹೇಳಿದ್ರಿ. ಈಗ ಜನಿವಾರ ಹಾಕಿದ್ದಾನೆ ಅಂತಿದ್ದೀರಿ. ಇದಕ್ಕೇನೇಳ್ತೀರಿ?' ಎಂದ ತುಂಟ ಯುವಕ.

'ಈ ವಿಷಯ ಇಲ್ಲಿಗೆ ಬಿಡಬಾರದು. ಈಗ ಜನಿವಾರ ಹಾಕಿರೋನು ನಾಳೆ ಅಗ್ರಹಾರಕ್ಕೂ ಬರ್ತಾನೆ. ಇಂಥ ಬೆಳವಣಿಗೆಯನ್ನೆಲ್ಲ ಆರಂಭದಲ್ಲೇ ಚಿವುಟಿ ಹಾಕಬೇಕು. ಪಟೇಲ್ರಿಗೆ ಹೇಳಿ ಪಂಚಾಯ್ತಿ ಸೇರ್ಸಿ. ಅಲ್ಲೆ ಅವನಿಗೆ ಬಂದೋಬಸ್ತ್ ಮಾಡೋಣ' ಎಂದ ಶ್ರೀಕಂಠ. ಅವರ ಮಾತಿಗೆ ಎಲ್ಲರೂ ಒಕ್ಕೊರಲಿನಿಂದ 'ಅದೇ ಸರಿ' ಎಂದರು.

ಪಟೇಲರ ಸೂಚನೆಯಂತೆ ಪಂಚಾಯ್ತಿ ಎಂದು ಸಾರಾಕಲು ಮುಳ್ಕಟ್ಟ ಹೆಗಲಿಗೆ ತಮಟೆ ಏರಿಸಿ ಊರ ಬೀದಿಗಿಳಿದ. ಮೊದಲೆಲ್ಲ ಬೇರೆಯವರ ಪಂಚಾಯ್ತಿಗೆ ಸಾರಾಕುತ್ತಿದ್ದ ಅವನಿಗೆ ಈಗ ತನ್ನ ಮಗನ ವಿರುದ್ಧವೇ ಸಾರಾಕಬೇಕಾದ ಮುಜುಗರ, ಬೇಸರ, ಅವಮಾನದ ಪರಿಸ್ಥಿತಿ ಎದುರಾಗಿತ್ತು.

ಜನರೆಲ್ಲ ಸೇರಿದರು. ಪಂಚಾಯ್ತಿ ಕಟ್ಟೆಯ ಮೇಲೆ ಪಟೇಲರು, ಶ್ರೀಕಂಠ, ರಾಮಸ್ವಾಮಿ, ಊರಿನ ಮುಖಂಡರಾದ ದಾಸೇಗೌಡ, ವೆಂಕಟಪ್ಪ ಆಸೀನರಾದರು.

ಪಟೇಲರು ಪಕ್ಕಕ್ಕೆ ತುಸು ಬಾಗಿ ನೋಡಿದರು. ಅವರ ನೋಟದ ಉದ್ದೇಶ ಅರ್ಥ ಮಾಡಿಕೊಂಡ ರಾಮಸ್ವಾಮಿ, 'ನಿನ್ನೆ ನಮ್ಮ ಮನೇಲಿ ಸತ್ಯನಾರಾಯಣಸ್ವಾಮಿ ಪೂಜೆ ಇತ್ತು. ಪೂಜೆಗೆ ಬಳಸಿದ ಕಬ್ಬಿನಗರಿ, ತುಳಸಿ ಹಾರ, ಕಳಸದ ನೀರನ್ನು ಕೆರೆಗೆ ಬಿಟ್ಟು ಬರಲು ಇವತ್ತು ಬೆಳಿಗ್ಗೆ ಹೋಗಿದ್ದೆ. ಆಗ ಕೆಳ್ಗೇರಿಯ ಮುಳ್ಕಟ್ಟನ ಮಗ ಗೊದ್ಲೆ ಬೆತ್ತಲಾಗಿ ನಾವೆಲ್ಲಾ ಪ್ರತೀ ದಿನ ಸ್ನಾನ ಮಾಡುತ್ತಿದ್ದ ಜಾಗದಲ್ಲೇ ಮುಳುಗೇಳಿ ಸೂರ್ಯನಿಗೆ ತರ್ಪಣ ಕೊಡುತ್ತಿದ್ದ.